**ಸಾಕ್ಷಿಗೆ ದಿನಾಂಕ 21.06.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು**

**ಪಾಟೀ ಸವಾಲುಃ- ಪ್ರತಿವಾದಿ-೧ರ ಪರ ಶ್ರೀ ಎಸ್.ಎನ್.ಜೆ. ವಕೀಲರಿಂದ**

ವಾದಿಯು ನನಗೆ ಕಾಲೇಜು ದಿನಗಳಿಂದ ಗೆಳೆಯನಾಗಿರುತ್ತಾನೆ. ನಾನು ಫೈನ ಆರ್ಟ್ ಪದವಿಯನ್ನು ವಾದಿಯೊಂದಿಗೆ ಕಲಿತಿರುತ್ತೇನೆ. ನನಗೆ ವಾದಿಯ ಮನೆತನದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಸಾಕ್ಷಿಯು ಮುಂದುವರೆದು, ನನಗೆ ವಾದಿಯ ಆಸ್ತಿಯ ಬಗ್ಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ನನಗೆ ಪ್ರತಿವಾದಿ ೧ ರವರ ಪರಿಚಯ ಇರುವುದಿಲ್ಲ. ನನಗೆ ೨ನೇ ಪ್ರತಿವಾದಿ ಪರಿಚಯ ಇರುವುದಿಲ್ಲ. ವಾದಿಯು ಈ ದಾವೆಯನ್ನು ಯಾವ ಪರಿಹಾರ ಕೇಳಿ ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಸುಮಾರು ೫೦ ವರ್ಷಗಳಿಂದ ನಾಗನೂರಿನಲ್ಲಿ ವಾಸವಾಗಿರುತ್ತೇನೆ.

೧ನೇ ಪ್ರತಿವಾದಿ ಎಲ್ಲಿ ವಾಸವಾಗಿರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ನಾನು ರಾಜಾಪೂರದಲ್ಲಿ ಯಾವುದೇ ಹೊಲವನ್ನಾಗಲೀ ಅಥವಾ ಮನೆಯನ್ನಾಗಲೀ ಹೊಂದಿರುವುದಿಲ್ಲ ಎಂದರೆ ಸರಿ. ವಾದಿಯ ತಂದೆಯ ಹೆಸರು ನನಗೆ ನೆನಪಿರುವುದಿಲ್ಲ. ವಾದಿಗೆ ೩ ಜನ ಅಣ್ಣ-ತಮ್ಮಂದಿರು ಇರುವ ಬಗ್ಗೆ ಮಾಹಿತಿ ಇರುತ್ತದೆ. ಆತನಿಗೆ ಎಷ್ಟು ಜನ ಅಕ್ಕ-ತಂಗಿಯರು ಇರುತ್ತಾರೆಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ವಾದಿಗೆ ಯಾವ ರೀತಿ ಬಂದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ, ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಪಹಣಿಯಲ್ಲಿ ವಾದಿಯ ಹೆಸರು ಇದ್ದುದ್ದರ ಬಗ್ಗೆ ನನಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಸುಮಾರು ೨೫ ವರ್ಷಗಳ ದಾವಾ ಆಸ್ತಿಯ ಪಹಣಿ ಪತ್ರಿಕೆಗಳನ್ನು ನೋಡಿರುತ್ತೇನೆ. ಸರ್ವೆ ನಂ. ೧೯೫ರ ಜಮೀನು ಸುಮಾರು ೧೫ ಎಕರೆ ವಿಸ್ತೀರ್ಣ ಇರಬಹುದು. ಸಾಕ್ಷಿಯು ಮುಂದುವರೆದು ನನಗೆ ನಿಖರವಾಗಿ ಅದರ ವಿಸ್ತೀರ್ಣ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ. ೧೯೫ರಲ್ಲಿ ಸುಮಾರು ೩ ರಿಂದ ೪ ವಿಭಾಗಗಳು ಆಗಿರಬಹುದು. ಸದರಿ ವಿಭಾಗಗಳ ವಿಸ್ತೀರ್ಣ ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಸಾಕ್ಷಿಯು ಮುಂದುವರದು ೧೯೫/೧ ಆಸ್ತಿಯ ವಿಸ್ತೀಣ ಈ ೫ ಎಕರೆ ೧೪ ಗುಂಟೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಪಿತ್ರಾರ್ಜಿತ ಆಸ್ತಿಯಾಗಿದ್ದು, ಸದರಿ ಆಸ್ತಿ ವಿಭಾಗ ಆಗಿದೆಯೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿರುವುದಿಲ್ಲ. ವಾದಿಯ ತಂದೆ ಮರಣ ಹೊಂದಿರುತ್ತಾರೆ.

ವಾದಿಯ ತಂದೆ ಸುಮಾರು ೪೦ ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ವಾದಿಯ ಹೆಸರಿಗೆ ಯಾವ ವರ್ಷದಲ್ಲಿ ಮ್ಯುಟೇಷನ ಆಗಿರುತ್ತದೆ ಎಂದು ನನಗೆ ಹೇಳಲಾಗುವುದಿಲ್ಲ. ಸದರಿ ಮ್ಯುಟೇಷನ್ ಯಾವ ಆಧಾರದ ಮೇಲೆ ಆಯಿತು ಎಂದು ನನಗೆ ಹೇಳಲಾಗುವುದಿಲ್ಲ.

ಮಾಣಿಕ ಮಲ್ಲಪ್ಪ ಇವರಿಗೆ ಸರ್ವೆ ನಂ. ೧೯೫/೧ ರಲ್ಲಿ ಆಸ್ತಿ ಹೇಗೆ ಬಂತು ಎಂದು ನನಗೆ ಗೊತ್ತಿರುವುದಿಲ್ಲ. ಮೈಸೂರು ಭೂಧಾನ್ಯ ಬೋರ್ಡನ ಆಸ್ತಿಯು ಸರ್ವೆ ನಂ. ೧೯೫/೨ ರಲ್ಲಿ ಇದ್ದು ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ೧ನೇ ಪ್ರತಿವಾದಿಯು ಸರ್ವೆ ನಂ. ೧೯೫/೩ ರ ಆಸ್ತಿಯಲ್ಲಿ ಕಬ್ಜೆಯನ್ನು ಹೊಂದಿದ್ದು, ಆತನೇ ಸದರಿ ಜಮೀನಿನಲ್ಲಿ ಸಾಗುವಳಿ ಮಾಡುತ್ತಿದ್ದಾನೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ರಾಜಾಪೂರದಲ್ಲಿ ಸಾಕಷ್ಟು ಜನರ ಆಸ್ತಿಗಳನ್ನು ಗೇಣಿಗೆ ಹಾಕಿಕೊಂಡಿದ್ದು, ಸದರಿ ಗೇಣಿಗೆ ಹಾಕಿಕೊಂಡಿದ್ದ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ನಾನು ನಮ್ಮೂರಿನಲ್ಲಿ ಒಕ್ಕಲುತನ ಮಾಡುತ್ತೇನೆ. ವಾದಿ ಮತ್ತು ೧ನೇ ಪ್ರತಿವಾದಿಯ ನಡುವೆ ಆಸ್ತಿಯ ಬಗ್ಗೆ ವ್ಯಾಜ್ಯ ಇದ್ದುದ್ದರ ಬಗ್ಗೆ ನನಗೆ ಯಾವುದೆ ಮಾಹಿತಿ ಇರುವುದಿಲ್ಲ ಎಂದರೆ ಸರಿ.

ನಾನು ರಾಜಾಪೂರದಲ್ಲಿ ವಾಸವಾಗದೇ ಇದ್ದುದ್ದರಿಂದ, ನಾನು ಅಲ್ಲಿ ಯಾವುದೇ ಜಮೀನಲ್ಲಿ ವ್ಯವಸಾಯ ಮಾಡದೇ ಇದ್ದರು ಕೂಡಾ, ವಾದಿಯು ನನ್ನ ಗೆಳೆಯನಾಗಿದ್ದು, ಈ ಪ್ರಕರಣಕ್ಕೆ ಅನುಕೂಲವಾಗುವಂತೆ ಒಂದು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ವಾದಿಯ ಹೆಸರಿನಲ್ಲಿ ಮ್ಯುಟೇಷನ್ ಆದಾಗ ವಾದಿಯ ವಯಸ್ಸು ಎಷ್ಟಿತ್ತು ಎಂದು ನನಗೆ ಗೊತ್ತಿರುವುದಿಲ್ಲ. ನಾನು ರಾಜಾಪೂರದಲ್ಲಿ ಯಾವುದೇ ಜಮೀನುಗಳನ್ನು ಗೇಣಿಗೆ ಹಾಕಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

ನನಗೆ ಗುಂಡುರಾವ ಇವರ ಪರಿಚಯ ಇರುವುದಿಲ್ಲ.

ದಾವಾ ಆಸ್ತಿಯ ಪೂರ್ವಕ್ಕೆ ಸರಕಾರಿ ಜಮೀನು ಇದ್ದು, ಪಶ್ಚಿಮಕ್ಕೆ ವಾದಿಯ ಹೊಲ ಇದ್ದು, ಉತ್ತರಕ್ಕೆ

ಕಾಲುದಾರಿ, ದಕ್ಷಿಣಕ್ಕೆ ವಾದಿಯ ಹೊಲ ಇರುತ್ತದೆ. ಸದರಿ ದಕ್ಷಿಣಕ್ಕೆ ಇರುವ ಹೊಲದ ವಿಸ್ತೀರ್ಣ ನನಗೆ ಹೇಳಲಾಗುವುದಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳು ಸುಳ್ಳಾಗಿರುತ್ತವೆ ಎಂದರೆ ಸರಿಯಲ್ಲ

**ಪಾಟೀ ಸವಾಲುಃ- ೨ನೇ ಪ್ರತಿವಾದಿ ಪರ ಶ್ರೀ ವಿ.ಆರ್.ಕೆ. ವಕೀಲರಿಂದ**

೨ನೇ ಪ್ರತಿವಾದಿ ಪರ ಶ್ರೀಮತಿ ವಿ.ಆರ್.ಕೆ. ವಕೀಲರು ಶ್ರೀ ಎಲ್.ಎ.ಪಿ. ವಕೀಲರು ಹಾಜರಿದ್ದು, ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ. ಸಕಾರಣ ಇಲ್ಲದೇ ಇರುವುದರಿಂದ, ೨ನೇ ಪ್ರತಿವಾದಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ

{ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು}

ಓ.ಹೇ.ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಚಿತ್ತಾಪೂರ.